ರಾಜೇಂದ್ರ ಆನೆಯಂ ಸುಮಾರಂ ಫೆಬ್ರುವರಿ ೧೯೮೮ ರಿಂದ ಅಸ್ವಸ್ಥವಾಗಿದ್ದು, ಪಶು ವೈದ್ಯಾಧಿಕಾರಿಗಳು ಗುಣಪಡಿಸಲು ಔಷಧೋಪಚಾರಗಳನ್ನು ಮಾಡುತ್ತಿದ್ದರೂ ಕೂಡ ಕೊನೆ ಕೊನೆಗೆ ನಿತ್ರಾಣಗೊಂಡು ಮೇಲಿನ ದಿನಾಂಕದಂದು ಮೃತಪಟ್ಟಿರುತ್ತದೆ.

ಇಲಾಖಾ ನಿಯಮದಂತೆ ಮೃತಪಟ್ಟ ಆನೆಯನ್ನು ಮರಣೋತ್ತರ ಪರೀಕ್ಷೆಗೆ ಗುರಿಪಡಿಸಿದ್ದು, ಮರಣೋತ್ತರ ಪರೀಕ್ಷೆಯ ವರದಿಯನುಸಾರ ಆನೆಯು ವಿಷ ಪ್ರಾಶನದಿಂದ ಸತ್ತಿರುವುದಿಲ್ಲವೆಂದು ಖಚಿತವಾಗಿರುತ್ತದೆ.

ಆನೆಯು ಮೃತನು ಈ ಆನೆಯು ಸಾವಿಗಿಂತ ಒಂದು ವಾರದ ಮುಂಚಿತವಾಗಿ ಲಾರಿ ಅಪಘಾತದಿಂದ ಸತ್ತಿರುವುದು ನಿಜ. ಮೃತನು ಸತ್ತ ನಂತರ ಅದೇ ಆನೆಗೆ ಸಂಬಂಧಪಟ್ಟ ಕಾವಾಡಿಯು ಪಳಗಿಸುತ್ತಿದ್ದವನಿಂದು ತಿಳಿದು ಬಂದಿರುವುದಲ್ಲದೆ ಆನೆಯು ಯಾವುದೇ ತೊಂದರೆಯನ್ನು ಕೊಡುತ್ತಿರಲಿಲ್ಲ

ಈ ಸತ್ತ ಆನೆಯು ದಂತವು ಅಂದಾಜು ೯ ಕೆ. ಜಿ.ಯಷ್ಟು ತೂಕವಾಗುವುದೆಂದೂ ಮತ್ತು ಈ ದಂತದ ಜೊತೆಯು ತಿತಿಮತಿ ವಲಯ ಅರಣ್ಯಾಧಿಕಾರಿಗಳ ಸುಬರ್ದಿನಲ್ಲಿರುತ್ತದೆ.

ಮೇಲೆ ವಿವರಿಸಿದಂತೆ, ರಾಜೇಂದ್ರ ಆನೆಯು ಶಂಕಾಸ್ಪದವಾಗಿ ಸತ್ತಿರುವುದಿಲ್ಲ. ಅಲ್ಲದೆ, ಇದರ ದಂತಕ್ಕಾಗಿ ವಿಷಪ್ರಾಶನೆ ಮಾಡಿ, ಯಾರೂ ಕೊಂಡಿರುವುದಿಲ್ಲ.

ಶಾಸನ ರಚನೆ ಕಾರ್ಯಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪತ್ರ ಮಂಡನೆ ಮಾಡುವ ಸಮಯದಲ್ಲಿ ಹಲವಾರು ವಿನಾಯಿತಿಗಳನ್ನು ಮಾರಾಟ ತೆರಿಗೆ ವಿಷಯದಲ್ಲಿ ಸೂಚಿಸಿದ್ದರು. ಆ ವಿನಾಯಿತಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನಿನಲ್ಲಿ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಜೊತೆಗೆ ಕೆಲವು ತೆರಿಗೆಗಳ ದರಗಳನ್ನು ಇಳಿಸಿದ್ದೇವೆ. ಆ ದರಗಳ ಇಳಿತಕ್ಕೆ ಸಂಬಂಧಪಟ್ಟ ತಿದ್ದುಪಡಿಗಳು ಕೂಡ ಇದರಲ್ಲಿವೆ. ವರ್ಷವನ್ನು ಮಾರ್ಚ್ ತಿಂ ರಿಂದ ಪ್ರಾರಂಭವಾಗಬೇಕಂ ಎಂದು ಇದರಲ್ಲಿ ತಿದ್ದುಪಡಿ ಸೂಚನೆ ಮಾಡಿದ್ದೇವೆ. ಇದನ್ನು ಕರ್ನಾಟಕ ಹೈಕೋರ್ಟ್ ತೀರ್ಮಾನದಂತೆ ಮಾಡಲಾಗಿದೆ.

೨-೦೦ ಪಿ. ಎಂ.

ಇದರ ಜೊತೆಗೆ ಇದರಲ್ಲಿ ಬರತಕ್ಕ ಅನೇಕ ವಸ್ತುಗಳ ಹೆಸರನ್ನು ಅಕ್ಷರ ಮಾಲೆಯ ರೀತ್ಯ ಇದರಲ್ಲಿ ಅಳವಡಿಸಲಾಗಿದೆ. ಸುಲಭವಾಗಿ ಆ ಪಟ್ಟಿಯನ್ನು ನೋಡಲಿಕ್ಕೆ ಅನುಕೂಲವಾಗಲಿ ಅಂತ ಹೇಳಿ ಇದರಲ್ಲಿ ತಿದ್ದುಪಡಿಯನ್ನು ತರಲಾಗಿದ್ದು ಈ ಒಂದು ತಿದ್ದುಪಡಿಯಲ್ಲಿ ಅಡಕವಾಗಿರತಕ್ಕ ವಿಷಯಗಳೂ ಅದೇ ಆಗಿವೆ. ಇದರ ಜೊತೆಗೆ ಒಂದು ತಿದ್ದುಪಡಿಯನ್ನೂ ಕೂಡ ಇದರಲ್ಲಿ ಸೂಚಿಸಿದ್ದೇವೆ. ಈ ಒಂದು ತಿದ್ದುಪಡಿಅತ್ಯವಶ್ಯಕವಾಗಿ ಕಂಡುಬಂದದ್ದರಿಂದ ಅದನ್ನು ಇದರಲ್ಲಿ ಸೂಚಿಸಲಾಗಿದೆ. ಆ ಒಂದು ತಿದ್ದುಪಡಿ ಏನೆಂದರೆ ತಿದ್ದುಪಡಿ

"Provided further that no tax under this sub-section shall be levied and collected upto the 31st day of May 1988

on subseeuent sales excepting the last sale of alcoholic liquors for human consumptio (other than toddy arrack, fenny· wine and beer) which have already been subjected to tax at the rate of 45 percent prior to 31st day of March 88 under clause (a) of sub secrion (3) of section 5 of the Act "

ಇದರಲ್ಲಿ ಏನಾಗಿದೆ ಎಂದರೆ ತೆರಿಗೆಯು ಶೇ ೪೫ ರಷ್ಟು ಇತ್ತು. ಮೊದಲನೇ ಸೇಲ್ ಪಾಯಿಂಟ್ ಮತ್ತು ಕೊನೆಯ ಸೇಲ್ ಪಾಯಿಂಟ್ ಎಂಬುದಾಗಿ ಇದೆ. ಮೊದಲನೇ ಸೇಲ್ ಪಾಯಿಂಟ್‌ನಲ್ಲಿ ೪೫ ಪರ್ಸೆಂಟ್. ಕೊನೆಯ ಸೇಲ್ ಪಾಯಿಂಟ್‌ನಲ್ಲಿ ೫ ಪರ್ಸೆಂಟ್ ಇತ್ತು, ತೆರಿಗೆ ಸೋರಿ ಹೋಗುತ್ತಿದೆ ಎನ್ನುವ ಕಾರಣಕ್ಕೂ ಸ್ಕರ ಎಲ್ಲ ಹಂತದಲ್ಲೂ ತೆರಿಗೆಯನ್ನು ಹಾಕತಕ್ಕ ಒಂದು ತಿದ್ದುಪಡಿ ಇದರಲ್ಲಿದೆ, ಇದರ ಜೊತೆಗೆ ಈ ತೆರಿಗೆಯ ಹಂತಕ್ಕೆ ೩೫ ಪರ್ಸೆಂಟ್ ವಿರಿಸಿತ್ತು. ಈ ಒಂದು ತಿದ್ದುಪಡಿ ವಿದೇಯಕ ೩೧-೩-೧೯೮೮ ರಿಂದ ೩೧-೫-೧೯೮೮ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಕೆಲವರು, ಬೀರ್, ವಿಸ್ಕಿ, ಬ್ರಾಂದಿ ಇವುಗಳನ್ನು ದಾಸ್ತಾನು ಇಟ್ಟಿದ್ದರು. ಈ ರೀತಿ ದಾಸ್ತಾನು ಇಟ್ಟಂತಹವರು ನಮ ೨ ಕಡೆಯೂ ತೆರಿಗೆ ಬೀಳುತ್ತದೆ. ಅಂದರೆ ಮೊದಲ ಸೇಲ್ ಪಾಯಿಂಟ್‌ನಲ್ಲಿ ೪೫ ಪರ್ಸೆಂಟ್‌ಗೆ ತೆರಿಗೆ ಹಾಗೂ ಕೊನೆಯ ಸೇಲ್ ಪಾಯಿಂಟ್‌ನಲ್ಲಿ ೫ ಪರ್ಸೆಂಟ್ ತೆರಿಗೆ ಹೀಗೆ ಒಟ್ಟು ೮೦ ಪರ್ಸೆಂಟ್ ತೆರಿಗೆ ಬೀಳುತ್ತದೆ. ನಮಗೆ ಸ್ವಲ್ಪ ರಿಯಾಯಿತಿಬೇಕೆಂದು ಕೇಳಿದರು. ಅದೂ ೨ ತಿಂಗಳು ಮಾತ್ರ ಜಾರಿಯಲ್ಲಿರತಕ್ಕ ಈ ಒಂದು ತಿದ್ದುಪಡಿ ಮೊದಲ ಸೇಲ್ ಪಾಯಿಂಟ್‌ನಲ್ಲಿ ಯಾವ ಮಟ್ಟದಲ್ಲಿ ತೆರಿಗೆಯನ್ನು ಕೊಡುತ್ತಿದ್ದಾರೋ ಅದೇ ಮಟ್ಟದಲ್ಲಿ ತೆರಿಗೆಯನ್ನು ಕೊಡಂಥದಕ್ಕೆ ಅವರಿಗೆಅವಕಾಶ ನೀಡತಕ್ಕ ಈ ಒಂದು ತಿದ್ದುಪಡಿ ಆ ಬಗ್ಗೆ ವಿಷಯಗಳು ಅಡಕವಾಗಿವೆಯೇ ಹೊರತು ಹೊಸದಾದ ವಿಚಾರಗಳೂ ಏನೂ ಇದರಲ್ಲಿ ಇಲ್ಲ. ಸನ್ಮಾನ ಸದಸ್ಯರು ಆಯವ್ಯಯ ಪತ್ರದ ಮೇಲೆ ನಡೆದಂತಹ ಸಾಮಾನ್ಯ ಚರ್ಚೆಯಲ್ಲಿ ವ್ಯಾಪಕವಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಆ ಸಮಯದಲ್ಲಿ ಈ ಒಂದು ತಿದ್ದುಪಡಿ ವಿಧೇಯಕ ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಕರವನ್ನು ಮಾತ್ರ ವಸೂಲು ಮಾಡುವುದಕ್ಕೆ ಸರ್ಕಾರ ಈಗಾಗಲೇ ಅಧಿಕಾರವನ್ನು ಪಡೆದುಕೊಂಡಿದೆ. ಕರವನ್ನು ವಸೂಲು ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ಇದು ೨ ತಿಂಗಳೊಳಗೇ ಕಾನೂನು ಆಗಬೇಕಾದ ಕಾರಣ ಕ್ಕೂಸ್ಕರ ಈ ಸದನದ ಮುಂದೆ ಮಂಡಿಸಿದ್ದೇವೆ. ಹೊಸದಾದ ವಿಚಾರ ಏನೂ ಇಲ್ಲ. ಸರ್ವೇ ಸಾಮಾನ್ಯವಾದ ವಿಚಾರ. ಇದಕ್ಕೆ ಅನೇಕ ವಿಧವಾದ ರಿಯಾಯಿತಿಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿ ಗಳು ತಮ್ಮ ಆಯವ್ಯಯ ಪತ್ರದಲ್ಲಿ ತೋರಿಸಿದ್ದಾರೆ. ಆವುಗಳೆಲ್ಲವೂ ಸ್ವಾಗತಾರ್ಹವೆಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಸದಸ್ಯರು ಈ ಒಂದು ತಿದ್ದುಪಡಿ ವಿಧೇಯಕಕ್ಕೆ ತಮ್ಮ ಬೆಂಬಲವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ವಾಗ್ದಾನ ಮಾಡಿದಂತೆ ತಿದ್ದುಪಡಿಯನ್ನು ತರಲಾಗಿದೆ ಎಂಬುದಾಗಿ ಹೇಳಿದ್ದಾರೆ ಅದರ ಪ್ರಕಾರವೇ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆಂದೂ ಕೂಡ ಮಾನ್ಯ ಕಾನೂನು ಸಚಿವರು ತಿಳಿಸಿದ್ದಾರೆ. ಆಗತ್ಯ ವಿಷಯಗಳಿಗೆ ತಿದ್ದುಪಡಿಯನ್ನು ತರಬೇಕಾಗಿದೆ. ಇದು ರೊಟಿನ್ ಮ್ಯಾಟರ್, ಆದಕ್ಕೆ ಯಾರೂ ಆಬ್ಜೆಕ್ಟ್ ಮಾಡುವುದಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ಸೇಲ್ಸ್ ಟ್ಯಾಕ್ಸ್‌ನು ಪ್ರಪಂಚದಲ್ಲೊಂದು ವಸ್ತುಗಳ ಮೇಲೆ ಹಾಕಲಾಗಿದೆ. ಇಂತಹ ವಸ್ತುಗಳ ಮೇಲೆ ತೆರಿಗೆಯನ್ನೂ ಹಾಕಿಲ್ಲ ಅಂತ ಇಲ್ಲ. ಇದರಿಂದ ಬಳಕೆದಾರರಿಗೆ ತೊಂದರೆಯಾಗುತ್ತಿದೆ. ನಂತರ ಬೆಲೆ ಗಳು ಕೂಡ ದಿನೇ ದಿನೇ ಹೆಚ್ಚಾಗುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ. ಇಷ್ಟೆಲ್ಲಾ ಬಾರವನ್ನು ಆವರ ಮೇಲೆ ಹಾಕಿದರೂ ಕೂಡ ಅನೇಕ ದೊಡ್ಡ ದೊಡ್ಡ ವ್ಯಾಪಾರಸ್ಥರು ಹೇಗೆ ತಪ್ಪಿಸಿಕೊಳ್ಳುತ್ತಾ ರೆಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇವರನ್ನು ಬಲಿಯಾಗತಕ್ಕ ಒಂದು ಪ್ರಯತ್ನವನ್ನು ಸರ್ಕಾರದವರು ಪ್ರಾಮಾಣಿಕವಾಗಿ ಮಾಡಬೇಕು. ತಮಗೆ ಗೊತ್ತಿದ್ದ ಹಾಗೆ ಹೊಂದ ಸಲ ತಾವೇ ಎಲ್ಲರಿಗೂ ಒಂದೊಂದು ಪಟ್ಟಿಯನ್ನೇ ಕೊಟ್ಟಿದ್ದೀರಿ. ಎಕ್ಸೈಜ್ ಬಾಬ್ತು ಯಾರ್ಯಾರಿಂದ ಎಷ್ಟೆಷ್ಟು ಬಾಕಿ ಇದೆ ? ಅದೇ ರೀತಿ ವಾಣಿಜ್ಯ ತೆರಿಗೆಯ ಬಾಬ್ತು ಯಾರ್ಯಾರಿಂದ ಎಷ್ಟೆಷ್ಟು ತೆರಿಗೆ ಬಾಕಿ ಬರಬೇಕು ಎನ್ನುತಕಂತದ್ದನ್ನು ತಾವೇ ತಿಳಿಸಿದ್ದೀರಿ. ಇದರ ಜೊತೆಯಲ್ಲಿ ಸೇಲ್ಸ್ ಟ್ಯಾಕ್ಸ್ ಹೆಚ್ಚು ಮಾಡಿ ವಸೂಲು ಮಾಡತಕ್ಕದ್ದನ್ನು ಮಾಡುತ್ತೀರಿ. ಆದರೆ ಯಾರು ಮೂರುದೊಡ್ಡ ದೊಡ್ಡ ವ್ಯಾಪಾರಸ್ಥರು

ಇದ್ದಾರೆ ಅವರಿಂದ ಬಾಕಿಯನ್ನು ಪ್ರಾಮಾಣಿಕವಾಗಿ ವಸೂಲು ಮಾಡತಕ್ಕ ವ್ಯವಸ್ಥೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಮಾಡಬೇಕು ಈ ಬಗ್ಗೆ ಅವರಲ್ಲಿ ಸಾಕಷ್ಟು ಸಿಬ್ಬಂದಿ ಇದೆ. ಮತ್ತೆ ಆಸಕ್ತಿ ವಹಿಸಿ ಅಪೀಲ್ ಕೇಸ್‌ಗಳು ಏನಿವೆ ಅವುಗಳನ್ನು ಬೇಗ ಡಿಸ್‌ಪೋಸಲ್ ಮಾಡಬೇಕು, ಎಷ್ಟೋ ಕಡೆ ವ್ಯಾಪಾರಸ್ಥರು ಅವರು ಕಟ್ಟುವುದನ್ನು ತಪ್ಪಿಸಿಕೊಳ್ಳಲು ಅಪೀಲ್ ಫೈಲ್ ಮಾಡಿ ೨-೩ ವರ್ಷ ಕಾಲ ತಳ್ಳುತ್ತಾರೆ. ೫ ಲಕ್ಷ, ಅಥವಾ ೧೦ ಲಕ್ಷ ರೂಪಾಯಿ ಬಾಕಿ ಇರುವವರು ಇಷ್ಟು ಕಾಲ ತಪ್ಪಿಸಿ ಕೊಂಡರೆ ಅದಕ್ಕೆ ಬಡ್ಡಿ ಎಷ್ಟು ಆಗುತ್ತದೆ ? ಕಾನೂನು ಎಂದ ಮೇಲೆ ಯಾವುದಾದರೂ ಲೂಪ್ ಹೋಲ್ ಇದ್ದೇ ಇರುತ್ತದೆ. ಆ ಲೂಪ್ ಹೋಲ್ ಮೇಲೆ ಅಪೀಲ್ ಹಾಕಿ ಕೊಡತಕ್ಕ ಹಣವನ್ನು ಕೊಡುವುದಿಲ್ಲ. ಮತ್ತೆ ಇದೇ ೨೦ ಲಕ್ಷ ಅವನ ಹತ್ತಿರವೇ ಇದ್ದರೆ ಲಕ್ಷಾಂತರದವರೆವಿಗೂ ಬಡ್ಡಿ ಉಳಿತಾಯವಾಗುತ್ತದೆ.

ಅಧ್ಯಕ್ಷರು.—ಮಾನ್ಯ ನಾರಾಯಣರಾವ್ ಅವರೇ, ಮಿನಿ ಅಸೆಂಬ್ಲಿಯನ್ನು ನೀವು ಅಲ್ಲಿ ಮಾಡಬೇಡಿ.

ಶ್ರೀ ಎಂ. ಎಂ. ಖಾರ್ಗೆ.—ಮಾನ್ಯ ನಾರಾಯಣರಾವ್ ಅವರು ಮಿಾಟಿಂಗ್ ಅಲ್ಲಿ, ಮಾನ್ಯ ರಾಜವರ್ಧನ್ ಹಾಗೂ ಮಾನ್ಯ ಲಕ್ಷ್ಮಿ ಸಾಗರ್‌ರವರ ಮಿಾಟಿಂಗ್ ಇಲ್ಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಒಳ್ಳೆಯ ದಾರಿಯಲ್ಲಿ ಹೋಗಲಿ ನಾನು ಅವರಿಗೇ ಉತ್ತರವನ್ನು ಹುಡುಕುತ್ತಿದ್ದೇನೆ,

ಶ್ರೀ ಎಂ. ಎಂ. ಖಾರ್ಗೆ.—ಮುಂಖ್ಯಸಚೇತಕರ ಜಾಗ ಹಿಂದೆ, ಇಲ್ಲಿ ಅವರೇನು ಸಲಹೆ ಕೊಡುತ್ತಿದ್ದಾರೆ ? ಪಾಪ ಮಾನ್ಯ ನಾರಾಯಣರಾವ್ ಅವರು ಡಾ : ತಿಪ್ಪೇಸ್ವಾಮಿಯವರು, ಮಾನ್ಯ ಖೇಡ್ ಅವರು, ಮಾನ್ಯ ಗುರುಪ್ರಸಾದ್ ಅವರು ಸೇರಿ ಸಲಹೆ ಸೂಚನೆ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಇದೆಲ್ಲಾ ಏಕೆ ?

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆಯವರ ಆಂತರಿಕ ವಿಚಾರದಲ್ಲಿ ಬಾಯಿ ಹಾಕದಿದ್ದರೆ ಇವರಿಗೆ ನಿದ್ರೆಯೇ ಬರುವುದಿಲ್ಲ. ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಕೆಲಸ ? ನಮ್ಮ ಪಾಡಿಗೆ ನಮ್ಮನ್ನು ಬಿಡಿ.

ಶ್ರೀ ಎಂ. ಎಂ. ಖಾರ್ಗೆ.—ನಾವು ಬಿಟ್ಟರೂ ಜನರು ಬಿಡುವುದಿಲ್ಲ. ಇನ್ನು ನಾನು ವಿಷಯಕ್ಕೆ ಬರುತ್ತೇನೆ ಇವತ್ತು ನೀವು ಅದನ್ನೆಲ್ಲಾ ರಿಕವರಿ ಮಾಡಬೇಕಾದರೆ ಸ್ಪೆಷಲ್ ಡ್ರೈವ್ ಮಾಡಬೇಕು. ಆ ಮೂಲಕ ಅರಿಯರ್ಸ್ ವಸೂಲಿ ಮಾಡಬೇಕು. ಈ ಅರಿಯರ್ಸ್ ಬಗ್ಗೆ ನಾನು ಹೋದಸಲ ಪ್ರಶ್ನೆಯನ್ನು ಕೇಳಿದ್ದೆ. ಮುಂಖ್ಯ ಮಂತ್ರಿಗಳು ಇದರ ಬಗ್ಗೆ ಡ್ರೈವ್ ಮಾಡಿ ವಸೂಲಿ ಮಾಡಬೇಕೆಂದು ನಾನು ಹೇಳುತ್ತೇನೆ,

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಸಲ ಮಾನ್ಯ ಖಾರ್ಗೆಯವರು ಬಹಳ ಚೆನ್ನಾಗಿ ಅರ್ಥಪೂರ್ಣವಾಗಿ ಮಾತನಾಡುತ್ತಾರೆ. ತಮ್ಮ ಪ್ರತಿಭೆಯನ್ನು ಇಲ್ಲಿ ತೋರಿಸಿದ್ದಾರೆ,

ಅಧ್ಯಕ್ಷರು.—ಯಾವಾಗಲಾದರೂ ಎಡವುತ್ತಾರೆ,

ಶ್ರೀ ಎಂ. ಎಂ. ಖಾರ್ಗೆ.—ನಮ್ಮದು ಗಂಡು ಭಾಷೆ. ಅದಕ್ಕೇ ಅವರಿಗೆ ಚುಚ್ಚಿದಹಾಗೆ ಆಗುತ್ತದೆ. ಅಧ್ಯಕ್ಷರೇ, ನಿಮ್ಮ ಕಡೆ ಭಾಷೆಯೂ ನಮ್ಮದರ ರೀತ್ಯ ಗಂಡಾಂ ಭಾಷೆಯೇ,

ಶ್ರೀ ರಾಮಕೃಷ್ಣ ಹೆಗಡೆ.—ಇದು ಅಪರೂಪದ ವಿಚಾರ ಆಗದೇ ಇರಲಿ ಎಂದು ನಾನು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ವಸೂಲಿ ಮಾಡಬೇಕು ಎಂದು ಹೇಳಿದ್ದಾರೆ. ಅವರಿಗೂ ನೆನಪು ಇದೆ ಎಂದು ನಾನು ಭಾವಿಸುತ್ತೇನೆ. ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ತೆರಿಗೆ ಅಬಕಾರಿ ತೆರಿಗೆಯನ್ನು ನಮ್ಮ ಸರ್ಕಾರ ವಿಶೇಷ ಪ್ರಯತ್ನ ಮಾಡಿ ಸ್ಪೆಷಲ್ ಡ್ರೈವ್ ಮಾಡಿ ವಸೂಲಿ ಮಾಡಿದೆ. ಅತ್ಯಧಿಕ ಪ್ರಮಾಣದಲ್ಲಿ ಈ ತೆರಿಗೆಯನ್ನು ವಸೂಲಿ ಮಾಡತಕ್ಕ ಪ್ರಯತ್ನವನ್ನು ನಾವು ಮಾಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ದೊಡ್ಡ ಮಾರಾಟಗಾರರು ತಪ್ಪಿಸಿಕೊಳ್ಳುತ್ತಾರೆಂದು ಹೇಳಿದರು, ನಾವು ಯಾರನ್ನೂ ಬಿಡುವುದಿಲ್ಲ, ಸಂಕೆದವರ ಮುಂದೆ ಸಂಕಿದುಃಖ ಹೇಳಿ ಕೊಂಡಹಾಗೆ ನಾವು.....

ಶ್ರೀ ಎಂ. ಎಂ. ಖಾರ್ಗೆ.—ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವರು ಸ್ವೇ ತೆಗೆದು ಕೊಳ್ಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ಯಾರಾ ೩೭ರಲ್ಲಿ, ಆಯವ್ಯಯ ಪತ್ರದಲ್ಲಿ ಇದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ.

"It is being proposed that the power of Karnataka Appellate Tribunal to grant stay of the recovery of taxes or penalty arising out of orders of the first appellate authority be taken away by amending the provisions of the Karnataka SalesTax Act of 1957 andthe Karnataka Appellate Tribunal Act. These amendments are being made to ensure better recovery of taxes."

ಇದಕ್ಕೆ ಉತ್ತರ ಇದರಲ್ಲಿ ಈಗಾಗಲೇ ಇದೆ. ಈ ರೀತಿ ನಾವು ಕಟ್ಟುನಿಟ್ಟಾಗಿ ಯಾವ ಮಂಲಾಜೂ ಇಲ್ಲದೆ ತೆರಿಗೆ ವಸೂಲಿ ಮಾಡಬೇಕೆಂದು ನಿಶ್ಚಯ ಮಾಡಿದ್ದೇವೆ. ಈ ನಿಶ್ಚಯದ ಪ್ರಕಾರ ನಾವು ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ವಸೂಲಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆಂಬ ಮಾತನ್ನು ಮಾನ್ಯ ಮಲ್ಲಿಕಾರ್ಜುನ ಖಾರ್ಗೆ ಅವರಿಗೆ ಹೇಳಬಯಸುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಗೌರವನೀಯ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

CLAUSE—1

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರು ಈಗ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"That in clause 1, for sub-clause (2), the following shall be substituted, namely.-

"(2)It shall come into force on the 1st day of April 1988"

ತಿದ್ದುಪಡಿಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ಮಾನ್ಯ ಸಭೆ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.
'ಪ್ರಶ್ನೆ ಏನೆಂದರೆ'

"In clause 1, for sub clause (2) the following shall be substituted namely "(2) It shall come into force on the 1st dayof April 1988"

Motion was adopted

ಅಧ್ಯಕ್ಷರು.—ಖಂಡ-೧ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರುತ್ತದೆ.

ಖಂಡ ೨ ರಿಂದ ೩ರ ವರೆಗೆ

ಅಧ್ಯಕ್ಷರು.—"ಖಂಡ ೨ ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೪

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಹೊಸ ಪ್ರಪೋಸಲ್ ಆಗಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಹೌದಂ.

ಅಧ್ಯಕ್ಷರು.—ಮಾನ್ಯ ಮಂಖ್ಯಮಂತ್ರಿಗಳು ಇನ್ನೊಂದು ತಿದ್ದುಪಡಿಯನ್ನು ಖಂಡ ೪ಕ್ಕೆ ಕೊಟ್ಟಿದ್ದಾರೆ, ಈಗ ಅದನ್ನು ಅವರು ಸಭೆಯ ಮುಂದೆ ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That in clause 4, in sub-clause (1) after the provision, the following provision shall be inserted, namely.-

"Provided further that no tax under this sub-section shall be levied and collected upto the 31st day of May 1988 on subsequent sales expecting the last sale of alcoholic liquors for human consumption (other than toddy, arrack, fenny, wine and beer) which have already been subjected to tax at the rate of forty five per cent prior to the 31st day of March, 1988 under clause (a) of sub-section (3) of Section 5 of the Act."

ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಎರಡನೇ ತಿದ್ದುಪಡಿಯನ್ನು ಮಾನ್ಯ ಸಭೆ ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಸಭೆಯ ಮುತಕ್ಕೆ ಹಾಕುತ್ತೇನೆ.

That in Clause 4, In Sub-clause (1) after the the proviso, the following proviso shall be inserted, namely.—

"Provided further that no tax under this sub-section shall be levied and collected upto the 31st day of May, 1988 on subsequent sales excepting the last sale of alcoholic liquors for human consumption (other than toddy, arrack, fenny, wine and beer) which have already been subject to tax at the rate of forty five per cent prior to the 31st of March,

1986 under clause (a) of sub-section (3) of Section 5 of the Act.''

ತಿದ್ದುಪಡಿಯನ್ನು ಅನುಮೋದಿಸಲಾಯಿತು

ಅಧ್ಯಕ್ಷರು.— ಖಂಡ-೪ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರುತ್ತದೆ.

ಖಂಡ ೫ರಿಂದ ೧೨ರವರೆಗೆ

ಅಧ್ಯಕ್ಷರು.— ''ಖಂಡ-೫ರಿಂದ ೧೨ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ..''

ತಿದ್ದುಪಡಿಯನ್ನು ಅಂಗೀಕರಿಸಲಾಯಿತು

(ಖಂಡ ೫ರಿಂದ ೧೨ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ಸಭೆಯ ಮುಂದೆ ಮಂಡಿಸಬೇಕು.

ಶ್ರೀ ಎ.ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.—

That in clause 13, in the second schedule.-

a) under part 'B', in Sl No. 4, for the words ''thirteen per cent''. the words ''ten percent'' Shall be substituted.

b) under part ' L' in Sl No. in item (iv), for the words ''two hundred percent'' the words ''ten per cent'' and for the words ''ten per cent'' the words ''two hundred per cent'' shall be substituted.

(c) under part 'M' in Sl.No 1. in item (iii), in sub-item (e) for the words ''machine tools (all kinds).'' the words ''machine tools such as twist drills, taps, reamers, cutters, dies grinding wheels, grinding belts, button bits, and the like'', shall be substituted.''

ತಿದ್ದುಪಡಿಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೆಲವು ತಪ್ಪುಗಳು ಇದ್ದವು ಅದನ್ನು ಈಗ ಸರಿ ಮಾಡಲಾಗಿದೆ. ಆದ್ದರಿಂದ ಈ ಕೊನೆಯ ತಿದ್ದುಪಡಿಯನ್ನು ಮಾನ್ಯ ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

''That in clause 13, in the second schedule....

(a) under part 'B' in Sl. No, 4. for the words ''thirteen percent''. the words ''ten percen'' shall be substituted,
(b) under part 'L' in Sl. No. 6, in item (iv) for the words two hundrer percent.'' the words ''ten persent''. and for the words ''ten percent'' the words ''two hundred percent'' shall be substituted.

(c) under part 'M' in Sl. No. 1, in item (iii) in sub-item (e) for the words "machine tools (all kinds)" the words "machine tools such as twist drills, taps, reamers, cutters, dies grinding weels grinding belts, button bits and the like" shall be substituted."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು

(ಖಂಡ–೧೩; ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ತಿದ್ದುಪಡಿಯಾದ ಮೊದಲನೇ ಖಂಡ ಥೀರ್ಫ್ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಥೀರ್ಫ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀ ಸಾಗರ್.— ಮಾನ್ಯ ಅಧ್ಯಕ್ಷರೇ "೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೊರುತ್ತೇನೆ."

ಅಧ್ಯಕ್ಷರು.— ಪ್ರಸ್ತಾಪ ಏನೆಂದರೆ, "೧೯೮೮ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಜೂರಿಗೆ ತಿದುಪಡಿ ಮಾಡಿರುವಂತೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1988-89ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ.

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ಇರ ತಕ್ಕಂಥ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಎರಡು ಮಾತಗಳನ್ನಾಡುವುದಕ್ಕೆ ನಿಂತಿದ್ದೇನೆ. ಕರ್ನಾಟಕದಲ್ಲಿ ಎಲ್ಲಾ ಮುನಿಸಿಪಾಲಿಟಿಗಳು ಕೆಲಸ ಮಾಡುತ್ತಿವೆ. ಆದರೆ ಈ ಮುನಿಸಿಪಾಲಿಟಿಗಳಂ ಯಾವ್ಯವು ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಆ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳು ಒಂದನೇ ಮತ್ತು ಎರಡನೇ ಸ್ಥಾನವನ್ನು ಸರ್ಕಾರದಲ್ಲಿ ನಡೆದುಕೊಂಡಿದೆ. ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿ ಸರ್ಕಾರದವರು ಬಂಗಳೂರು ಕಾರ್ಪೊರೇಷನ್ನಿಗೆ ಮೊದಲು ಸ್ಥಾನವನ್ನು ಕೊಟ್ಟು ಅದಕ್ಕೆ ಸುಮಾರು ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಮೇಲೆ ಮುನಿಸಿಪಾಲಿಟಿಗಳಲ್ಲಿ ಮೊದಲನೇ ಸ್ಥಾನವನ್ನು ಉಡುಪಿ ಮುನಿಸಿಪಾಲಿಟಿಗೆ ಕೊಟ್ಟಿದ್ದಾರೆ. ಆಮೇಲೆ ಎರಡನೇ ಸ್ಥಾನವನ್ನು ಮಡಿಕೇರಿ ಮತ್ತು ಪುತ್ತೂರಿಗೆ ಕೊಟ್ಟಿದ್ದಾರೆ. ಇವೆಲ್ಲ ಕಾಂಗ್ರೆಸ್ ಆಡಳಿತದಲ್ಲಿ ರುವ ಮುನಿಸಿಪಾಲಿಟಿಗಳು ಆದರೆ ಸರ್ಕಾರದ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ನಿಜಕ್ಕೂ ಅದು ನಾಚಿಕೆ ಗೇಡಿನ ವಿಷಯ. ಏನು ಆಗಿದೆ ಎಂದರೆ ಸರ್ಕಾರದವರು ಈ ಮುನಿಸಿಪಾಲಿಟಿಗಳಿಗೆ ಚೆಕ್ ಅನ್ನು ಕೊಟ್ಟಿದ್ದಾರೆ. ಅಂದರೆ ಮಡಿಕೇರಿ ಮುನಿಸಿಪಾಲಿಟಿಗೆ ಮೂರು ಲಕ್ಷ ರೂಪಾಯಿಂಗಳಿಗೆ ಚಿಕ್ ಅನ್ನು